ಧಾರ್ಮಿಕ ಸಂಸ್ಥೆಗಳ ಜೀರ್ಣೋದ್ಧಾರ, ರಿಪೇರಿಗಾಗಿ ರೂ. 6,05,000–00ಗಳನ್ನು ಸರ್ಕಾರವು ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ದೇವಾಲಯಗಳ ಸಿಬ್ಬಂದಿಗಳಿಗೆ ಸರ್ಕಾರದಿಂದ ಯಾವುದೇ ವೇತನ ನೀಡುತ್ತಿಲ್ಲ. ಆದರೆ ಅವರಿಗೆ ಆಯಾಯಾ ಸಂಸ್ಥೆಗಳ ವಾರ್ಷಿಕ ಆದಾಯಕ್ಕೆ ಅನುಗುಣವಾಗಿ ದೇವಾಲಯದ ನಿಧಿಯಿಂದ ವೇತನ ನೀಡಲಾಗುತ್ತಿದೆ.

ಬೆಂಗಳೂರು ವಿಭಾಗದಲ್ಲಿನ ಲೋಕೋಪಯೋಗಿಯ ವಿವಿಧ ಯೋಜನೆಗಳಿಗೆ ಹಣ ಬಿಡುಗಡೆ ಮಾಡುವುದು

2468 (3107) : ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ವಿಭಾಗದಲ್ಲಿನ ಲೋಕೋಪಯೋಗಿಯ ವಿವಿಧ ಯೋಜನೆ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಈವರೆಗೆ ಪಾವತಿಸಲು ಬಾಕಿ ಇರುವ ಬಿಲ್ಲುಗಳ ಸಂಖ್ಯೆ ಎಷ್ಟು; ಇವುಗಳು ಯಾವ ವರ್ಷದಿಂದ ಬಾಕಿ ಇವೆ;

ಆ) ಬಾಕಿ ಇರುವ ಬಿಲ್ಲುಗಳ ಒಟ್ಟು ಮೊತ್ತವೆಷ್ಟು;

ಇ) ಬಾಕಿ ಇರುವ ಬಿಲ್ಲುಗಳಿಗೆ ಸರ್ಕಾರದಿಂದ ಯಾವಾಗ ಹಣ ಬಿಡುಗಡೆ ಮಾಡಲಾಗುವುದು:

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯಲ್ಲಿನ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಲೋ.ಇ. ಬೆಂಗಳೂರು ವಿಭಾಗದಲ್ಲಿ ಯೋಜನೆ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಕಾಮಗಾರಿಗಳ ಒಟ್ಟು 72 ಬಿಲ್ಲುಗಳು ಇದ್ದು ಇವುಗಳು 2002–03 ನೇ ಸಾಲಿನಿಂದ ಬಾಕಿ ಇರುತ್ತದೆ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಕಾಮಗಾರಿಗಳ ಒಟ್ಟು 1807 ಬಿಲ್ಲುಗಳು ಬಾಕಿ ಇದ್ದು ಇವು 2001 ರಿಂದ ಬಾಕಿ ಇರುತ್ತವೆ.

ಆ) ಲೋ.ಇ. ಬೆಂಗಳೂರು ವಿಭಾಗದಲ್ಲಿ ಯೋಜನೆ ಅಡಿಯಲ್ಲಿ ರೂ. 348.29 ಲಕ್ಷ ಹಾಗೂ ಯೋಜನೇತರ ಅಡಿಯಲ್ಲಿ ರೂ. 1161.85 ಲಕ್ಷ ಒಟ್ಟು ರೂ. 1510.14 ಲಕ್ಷ ಬಿಲ್ಲುಗಳು ಪಾವತಿಗಾಗಿ ಬಾಕಿ ಇರುತ್ತದೆ.

ಇ) ಗುತ್ತಿಗೆದಾರರು ಮಾಡಿದಂತಹ ಕಾಮಗಾರಿಗಳಿಗೆ ಅನುದಾನದ ಲಭ್ಯತೆ ಹಾಗೂ ಕಾಲಕಾಲಕ್ಕೆ ಸಂಪನ್ಮೂಲಗಳನ್ನಾಧರಿಸಿ ಆರ್ಥಿಕ ಇಲಾಖೆಯಿಂದ ಹಣ ಭರವಸೆ ಪತ್ರ ಬಿಡುಗಡೆಯಾದ ನಂತರ ಗುತ್ತಿಗೆದಾರರ ಬಿಲ್ಲುಗಳನ್ನು ಜೇಷ್ಟತೆಯ ಆಧಾರದ ಮೇಲೆ ಪಾವತಿಸಲಾಗುವುದು.

ಬರ ಪೀಡಿತ ಪ್ರದೇಶಗಳಲ್ಲಿ ಭೂ ಕಂದಾಯ ಮನ್ನಾ ಬಗ್ಗೆ

2470 (2833) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಭೂ ಕಂದಾಯ ಮನ್ನಾ ಮಾಡಲು ಸರ್ಕಾರ ನಿರ್ಧರಿಸಿದೆ; (ಜಿಲ್ಲಾವಾರು ವಿವರ ನೀಡುವುದು):

ಆ) ಭೂ ಕಂದಾಯ ಮನ್ನಾ ಮಾಡಲು ನಿರ್ಧರಿಸುವಾಗ ಪರಿಗಣನೆಗೆ ತೆಗೆದುಕೊಳ್ಳಲಾಗುವ ಅಂಶಗಳಾವುವು;

ಇ) ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ನಿರ್ದೇಶಕರು ಈ ವಿಚಾರದಲ್ಲಿ ನೀಡಿರುವ ವರದಿಯಲ್ಲಿನ ಪ್ರಮುಖ ಅಂಶಗಳಾವುವು;

ಈ) ಉಳಿದ ತಾಲ್ಲೂಕುಗಳಲ್ಲಿ ಭೂ ಕಂದಾಯ ಮನ್ನಾ ಮಾಡಲು ಸರ್ಕಾರದ ನಿಲುವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು): ಅ) ರಾಜ್ಯದ 24 ಜಿಲ್ಲೆಗಳ 134 ತಾಲ್ಲೂಕುಗಳಲ್ಲಿ ಸರ್ಕಾರ ಈಗಾಗಲೇ ಭೂ ಕಂದಾಯವನ್ನು ಮನ್ನಾ ಮಾಡಿ ಆದೇಶಗಳನ್ನು ಹೊರಡಿಸಿದೆ: (ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿದೆ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಶೇ.100 ರಷ್ಟು ಭೂ ಕಂದಾಯವನ್ನು ಮನ್ನಾ ಮಾಡಿರುವ ತಾಲ್ಲೂಕುಗಳು	ಶೇ.50 ರಷ್ಟು ಭೂ ಕಂದಾಯವನ್ನು ಮನ್ನಾ ಮಾಡಿರುವ ತಾಲ್ಲೂಕುಗಳು
1	ಬೆಂಗಳೂರು (ನಗರ)	---	ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಬೆಂಗಳೂರು ಪೂರ್ವ
2	ಬೆಂಗಳೂರು (ಗ್ರಾಮಾಂತರ)	ರಾಮನಗರ ದೊಡ್ಡ ಬಳ್ಳಾಪುರ	ಚನ್ನಪಟ್ಟಣ, ದೇವನಹಳ್ಳಿ, ಹೊಸಕೋಟೆ, ನೆಲಮಂಗಲ ಕನಕಪುರ
3	ಬಾಗಲಕೋಟೆ	ಹುನಗುಂದ, ಬಾದಾಮಿ, ಬಾಗಲಕೋಟೆ	ಜಮಖಂಡಿ, ಮುಧೋಳ್
4	ಬೆಳಗಾಂ	ಗೋಕಾಕ, ರಾಮದುರ್ಗ, ಬೈಲ ಹೊಂಗಲ, ಸವದತ್ತಿ ಖಾನಾಪುರ, ಅಥಣಿ ಚಿಕ್ಕೋಡಿ	ಬೆಳಗಾಂ, ರಾಯಭಾಗ್, ಹುಕ್ಕೇರಿ
5	ಬಳ್ಳಾರಿ	ಬಳ್ಳಾರಿ, ಹಗರಿ ಬೊಮ್ಮನಹಳ್ಳಿ	ಹಡಗಲಿ, ಹೊಸಪೇಟೆ ಸಿರಗುಪ್ಪ, ಕೂಡ್ಲಗಿ, ಸಂಡೂರು
6	ಬೀದರ್	---	ಔರಾದ್, ಭಾಲ್ಕಿ, ಬೀದರ್, ಹುಮ್ನಾಬಾದ್

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಶೇ.100 ರಷ್ಟು ಭೂ ಕಂದಾಯ ವನ್ನು ಮನ್ನಾ ಮಾಡಿರುವ ತಾಲ್ಲೂಕುಗಳು	ಶೇ.50 ರಷ್ಟು ಭೂ ಕಂದಾಯವನ್ನು ಮನ್ನಾ ಮಾಡಿರುವ ತಾಲ್ಲೂಕುಗಳು
7	ಬಿಜಾಪುರ	ಮುದ್ದೇಬಿಹಾಳ್, ಬಾಗೇವಾಡಿ, ಇಂಡಿ ಬಿಜಾಪುರ್	ಸಿಂದಗಿ
8	ಚಾಮರಾಜನಗರ್	ಗುಂಡ್ಲುಪೇಟೆ ಚಾಮರಾಜನಗರ	ಕೊಳ್ಳೇಗಾಲ
9	ಚಿಕ್ಕಮಗಳೂರು	ಕಡೂರು, ತರೀಕೆರೆ	ಚಿಕ್ಕಮಗಳೂರು
10	ಚಿತ್ರದುರ್ಗ	---	ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ, ಚಳ್ಳಕೆರೆ ಹಿರಿಯೂರು
11	ದಾವಣಗೆರೆ	ಚನ್ನಗಿರಿ	ಹೊನ್ನಾಳಿ, ಹರಪನಹಳ್ಳಿ, ಜಗಳೂರು, ದಾವಣಗೆರೆ ಹರಿಹರ
12	ಧಾರವಾಡ	ಧಾರವಾಡ, ನವಲಗುಂದ ಹುಬ್ಬಳ್ಳಿ, ಕುಂದಗೋಳ್, ಕಲಘಟಗಿ	---
13	ಗದಗ	ಗದಗ, ಮುಂಡರಗಿ, ನರಗುಂದ, ರೋಣ, ಶಿರಹಟ್ಟಿ	---
14	ಗುಲ್ಬರ್ಗಾ	ಗುಲ್ಬರ್ಗಾ ಶಹಾಪುರ, ಆಳಂದ್ ಅಫ್ಜಲ್‌ಪುರ, ಯಾದಗೀರ್, ಚಿಂಚೋಳಿ ಜೇವರ್ಗಿ	ಸೇಡಂ, ಚಿತ್ತಾಪುರ, ಶೋರಾಪುರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಶೇ.100 ರಷ್ಟು ಭೂ ಕಂದಾಯ ವನ್ನು ಮನ್ನಾ ಮಾಡಿರುವ ತಾಲ್ಲೂಕುಗಳು	ಶೇ.50 ರಷ್ಟು ಭೂ ಕಂದಾಯವನ್ನು ಮನ್ನಾ ಮಾಡಿರುವ ತಾಲ್ಲೂಕುಗಳು
15	ಹಾಸನ	ಅರಸೀಕೆರೆ, ಬೇಲೂರು, ಹಾಸನ	ಅರಕಲಗೂಡು ಚನ್ನರಾಯಪಟ್ಟಣ, ಹೊಳೇನರಸೀಪುರ
16	ಹಾವೇರಿ	ಬ್ಯಾಡಗಿ ಹಿರೇಕೆರೂರು ರಾಣಿಬೆನ್ನೂರು, ಸವಣೂರು ಶಿಗ್ಗಾಂವ್, ಹಾವೇರಿ ಹಾನಗಲ್	----
17	ಕೋಲಾರ	ಗೌರಿಬಿದನೂರು ಚಿಂತಾಮಣಿ, ಗುಡಿ ಬಂಡೆ, ಶ್ರೀನಿವಾಸಪುರ	ಬಾಗೇಪಲ್ಲಿ ಶಿಡ್ಲಘಟ್ಟ, ಕೋಲಾರ ಮಾಲೂರು, ಬಂಗಾರುಪೇಟೆ, ಚಿಕ್ಕಬಳ್ಳಾಪುರ, ಮುಳಬಾಗಿಲು
18	ಕೊಪ್ಪಳ	ಕೊಪ್ಪಳ, ಕುಷ್ಟಗಿ ಯಲ್ಬುರ್ಗಾ ಗಂಗಾವತಿ	----
19	ಮೈಸೂರು	ನಂಜನಗೂಡು	ಹೆಚ್.ಡಿ. ಕೋಟೆ, ಹುಣಸೂರು, ಮೈಸೂರು ಟಿ. ನರಸೀಪುರ ಕೆ.ಆರ್. ನಗರ
20	ಮಂಡ್ಯ	ಮಂಡ್ಯ ಪಾಂಡವಪುರ	ಮದ್ದೂರು ಮಳವಳ್ಳಿ, ನಾಗಮಂಗಲ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಶೇ.100 ರಷ್ಟು ಭೂ ಕಂದಾಯವನ್ನು ಮನ್ನಾ ಮಾಡಿರುವ ತಾಲ್ಲೂಕುಗಳು	ಶೇ.50 ರಷ್ಟು ಭೂ ಕಂದಾಯವನ್ನು ಮನ್ನಾ ಮಾಡಿರುವ ತಾಲ್ಲೂಕುಗಳು
21	ರಾಯಚೂರು	ದೇವದುರ್ಗ	ರಾಯಚೂರು, ಲಿಂಗಸೂಗೂರು ಸಿಂಧನೂರು, ಮಾನ್ವಿ
22	ಶಿವಮೊಗ್ಗ	ಶಿಕಾರಿಪುರ	ಸಾಗರ, ಶಿವಮೊಗ್ಗ, ಸೊರಬ
23	ತುಮಕೂರು	ಕುಣಿಗಲ್ ತುರುವೇಕೆರೆ	ಚಿಕ್ಕನಾಯಕನಹಳ್ಳಿ ಕೊರಟಗೆರೆ ಮಧುಗಿರಿ ಪಾವಗಡ
24	ಉತ್ತರಕನ್ನಡ	ಮುಂಡಗೋಡು	ಹಳಿಯಾಳ
	ಒಟ್ಟು	**66**	**68**

ಆ) ಬೆಳೆಗಳ ಅಣೆವಾರಿ ಇಳುವರಿ ಪ್ರಮಾಣವನ್ನು ಅನುಸರಿಸಿ ಭೂ ಕಂದಾಯವನ್ನು ಮನ್ನಾ ಮಾಡಲಾಗುವುದು.

ಯಾವ ತಾಲ್ಲೂಕುಗಳ ಗ್ರಾಮಗಳಲ್ಲಿನ ಇಳುವರಿ ಪ್ರಮಾಣವು ಶೇ. 25 ಕ್ಕಿಂತಲೂ ಕಡಿಮೆ ಇರುವುದೋ ಅಂತಹ ತಾಲ್ಲೂಕುಗಳಲ್ಲಿ ಶೇ. 100 ರಷ್ಟು ಭೂ ಕಂದಾಯವನ್ನು ಹಾಗೂ ಯಾವ ತಾಲ್ಲೂಕುಗಳ ಗ್ರಾಮಗಳಲ್ಲಿನ ಇಳುವರಿ ಪ್ರಮಾಣವು ಶೇ. 25 ಕ್ಕಿಂತಲೂ ಜಾಸ್ತಿ ಆದರೆ ಶೇ. 50 ಕ್ಕಿಂತಲೂ ಕಡಿಮೆ ಇರುವುದೋ ಅಂತಹ ತಾಲ್ಲೂಕುಗಳಲ್ಲಿ ಶೇ. 50 ರಷ್ಟು ಭೂ ಕಂದಾಯವನ್ನು ಮನ್ನಾ ಮಾಡಿ ಆದೇಶಗಳನ್ನು ಹೊರಡಿಸಲಾಗಿದೆ.

ಇ) 1996–97 ರಿಂದ 2000–01 ರ ವರೆವಿಗಿನ ಅವಧಿಯಲ್ಲಿ ಹಾಗೂ ಪ್ರಸಕ್ತ ಸಾಲಿನಲ್ಲಿ ರಾಜ್ಯದ ವಿವಿಧ ತಾಲ್ಲೂಕುಗಳ ಗ್ರಾಮಗಳಲ್ಲಿ ಕೈಗೊಂಡ ಬೆಳೆ ಕಟಾವು ಪ್ರಮಾಣಗಳನ್ನು ಅನುಸರಿಸಿ ಯಾವ ತಾಲ್ಲೂಕುಗಳ ಗ್ರಾಮಗಳಲ್ಲಿನ ಇಳುವರಿ ಪ್ರಮಾಣವು ಶೇ. 25 ಕ್ಕಿಂತಲೂ ಕಡಿಮೆ ಇರುವುದೋ ಅಂತಹ ತಾಲ್ಲೂಕುಗಳ ಹಾಗೂ ಯಾವ ತಾಲ್ಲೂಕುಗಳ ಗ್ರಾಮಗಳಲ್ಲಿನ ಇಳುವರಿ ಪ್ರಮಾಣವು ಶೇ.25 ಕ್ಕಿಂತಲೂ ಜಾಸ್ತಿ ಆದರೆ ಶೇ. 50 ಕ್ಕಿಂತಲೂ ಕಡಿಮೆ ಇರುವುದೋ ಅಂತಹ ತಾಲ್ಲೂಕುಗಳ ವಿವರಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ನಿರ್ದೇಶಕರು ನೀಡಿದ್ದು ಇದರ ಮೇರೆಗೆ ಯಾವ ತಾಲ್ಲೂಕುಗಳ ಗ್ರಾಮಗಳಲ್ಲಿನ ಇಳುವರಿ ಪ್ರಮಾಣವು ಶೇ. 25 ಕ್ಕಿಂತಲೂ ಜಾಸ್ತಿ ಆದರೆ ಶೇ. 50 ಕ್ಕಿಂತಲೂ ಕಡಿಮೆ ಇರುವುದೋ ಅಂತಹ ತಾಲ್ಲೂಕುಗಳಲ್ಲಿ ಶೇ. 50 ರಷ್ಟು ಭೂ ಕಂದಾಯವನ್ನು ಮನ್ನಾ ಮಾಡಿ ಆದೇಶಗಳನ್ನು ಹೊರಡಿಸಲಾಗಿದೆ.

ಈ) ಸಂಬಂಧಿಸಿದ ಜಿಲ್ಲಾಧಿಕಾರಿಗಳು ನೀಡಿರುವ ವರದಿಗಳನ್ನು ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ನಿರ್ದೇಶಕರು, ಕೃಷಿ ಇಲಾಖೆ ಇವರುಗಳ ಅಭಿಪ್ರಾಯಕ್ಕಾಗಿ

ಕಳುಹಿಸಿಕೊಡಲಾಗಿದ್ದು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ಬೆಂಗಳೂರು ಮತ್ತು ಇನ್ನಿತರ ನಗರಗಳಲ್ಲಿ ಪರಿಸರ ಕಾಪಾಡುವುದು

2472 (2835) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಹಾಗೂ ಇನ್ನಿತರ ಮಹಾನಗರಗಳಲ್ಲಿ ಇತ್ತೀಚೆಗೆ ಪರಿಸರ ಹಾಗೂ ನೈರ್ಮಲ್ಯ ತುಂಬಾ ಹದಗೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಕಾಪಾಡಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು; ಈ ಬಗ್ಗೆ ಜನರಿಗೆ ತಿಳುವಳಿಕೆ ನೀಡಲಾಗಿದೆಯೆ;

ಇ) ಹಾಕಿಕೊಂಡಿರುವ ಕಾರ್ಯಕ್ರಮಗಳು ಇತ್ತೀಚಿನ ದಿನಗಳಲ್ಲಿ ಯಶಸ್ವಿಯಾಗಿದೆಯೆ;

ಈ) ಹೊಸ ಕಾರ್ಯಕ್ರಮಗಳ ನೀತಿ ಏನು; ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕೆಲವು ಕಡೆಗಳಲ್ಲಿ ಹೊಗೆ ಹಾಗೂ ತ್ಯಾಜ್ಯ ನೀರಿನ ಮಟ್ಟ ನಿಗದಿಪಡಿಸಲಾದ ಪ್ರಮಾಣಕ್ಕಿಂತ ಹೆಚ್ಚಿಗೆ ಇರುವುದು ಕಂಡು ಬಂದಿರುತ್ತದೆ, ಆದರೂ ಬೆಂಗಳೂರು ಮತ್ತು ಇತರ ನಗರಗಳಲ್ಲಿನ, ಪರಿಸರ ಒಟ್ಟಾರೆ ಹಾಳಾಗಿರುವುದಿಲ್ಲ.

ಆ) ಈ ಕೆಳಗಿನ ಪ್ರಮುಖ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಬೆಂಗಳೂರಿನ ಪ್ರಮುಖ ಪ್ರದೇಶಗಳಲ್ಲಿನ ಪರಿವೇಷ್ಯಕ ವಾಯುಗುಣ ಮಟ್ಟದ ಮೇಲ್ವಿಚಾರಣೆ

ಸಾರಿಗೆ ಮತ್ತು ಪೊಲೀಸ್ ಇಲಾಖೆಗಳ ಸಹಯೋಗದೊಂದಿಗೆ ವಾಹನಗಳಿಂದ ಹೊರಬರುವ ಹೊಗೆಯ ಉಸ್ತುವಾರಿಯನ್ನು ಪರಿಸರ ವಾಹಿನಿ ಮುಖೇನ ಮಾಡಲಾಗುತ್ತಿದೆ.

ನಿರಂತರ ನೀರಿನ ಗುಣಮಟ್ಟದ ವಿಶ್ಲೇಷಣೆ

ಪರಿಸರ ಬಾವುಟ ಮತ್ತು ಎಕೋ ಕ್ಲಬ್ ಕಾರ್ಯಕ್ರಮಗಳ ಮೂಲಕ ಪರಿಸರ ವಿಷಯಗಳ ಬಗ್ಗೆ ಜಾಗೃತಿ ಮೂಡಿಸುವುದು.

ದೊಡ್ಡ ಪ್ರಮಾಣದ ಕೆಂಪು ವರ್ಗದ ಉದ್ದಿಮೆಗಳಿಗೆ ಐ.ಎಸ್.ಒ. ದೃಢೀಕರಣ ಪತ್ರ ಕಡ್ಡಾಯಗೊಳಿಸಲಾಗಿದೆ.

ಇ) ಹೌದು

ಈ) ಮೇಲೆ ಪ್ರಸ್ತಾಪಿಸಲಾದವುಗಳು ಮುಂದುವರೆದ ಕಾರ್ಯಕ್ರಮಗಳಾಗಿರುತ್ತವೆ.

ತುರುವೇಕೆರೆ ತಾಲ್ಲೂಕಿನ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಹಣ ಬಿಡುಗಡೆ

2473 (2837) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಎಂಡೋಮೆಂಟ್ ಕಮಿಷನರ್ ಕಛೇರಿಗೆ ತುರುವೇಕೆರೆ ತಾಲ್ಲೂಕಿನ ದೇವಸ್ಥಾನಗಳ ಎಸ್ಟಿಮೇಟ್ ಸಹಿತ ಬಂದ ಕಡತಗಳೆಷ್ಟು; ಹಾಗೂ ಅವು ಯಾವುವು;